## ಕರ್ನಾಟಕ ಸರ್ಕಾರ

ಸಂಖ್ಯೆ: ಸಿಆಸುಇ 69 ಸೇಇವಿ 2013

ಕರ್ನಾಟಕ ಸರ್ಕಾರದ ಸಚಿವಾಲಯ
ವಿಧಾನಸೌಧ,
ಬೆಂಗಳೂರು, ದಿನಾಂಕ: 24.07.2013.

## ಸುತ್ತೋಲೆ

ವಿಷಯ : ಕರ್ನಾಟಕ ಆಡಳಿತ ನ್ಯಾಯ ಮಂಡಳಿ, ಕರ್ನಾಟಕ ಉಚ್ಛ ನ್ಯಾಯಾಲಯ ಮತ್ತು ಇತರ ನ್ಯಾಯಾಲಯಗಳು ನೀಡುವ ಆದೇಶಗಳ ಮೇಲೆ ಕ್ರಮ ತೆಗೆದುಕೊಳ್ಳುವ ಬಗ್ಗೆ.

ಉಲ್ಲೇಖ :1. ದಿನಾಂಕ:25.08.1990ರ ಅಧಿಕೃತ ಜ್ಞಾಪನ ಸಂಖ್ಯೆ:ಸಿಆಸುಇ 25 ಸೇಇವಿ 90
2. ದಿನಾಂಕ:09.07.2001ರ ಅಧಿಕೃತ ಜ್ಞಾಪನ ಸಂಖ್ಯೆ:ಸಿಆಸುಇ 06 ಸೇಅನ್ಯಾ 2001
3. ದಿನಾಂಕ:16.03.2013ರ ಸುತ್ತೋಲೆ ಸಂಖ್ಯೆ:ಸಿಆಸುಇ 07 ಸೇಇವಿ 2013

*****

ಕರ್ನಾಟಕ ಆಡಳಿತ ನ್ಯಾಯ ಮಂಡಳಿ, ಕರ್ನಾಟಕ ಉಚ್ಛ ನ್ಯಾಯಾಲಯ ಮತ್ತು ಇತರೆ ನ್ಯಾಯಾಲಯಗಳು ಅರ್ಜಿ, ರಿಟ್‌ಅರ್ಜಿ ಮತ್ತು ಮೇಲ್ಮನವಿಗಳಲ್ಲಿ ನೀಡುವ ಆದೇಶಗಳನ್ನು ಪುನರಾವಲೋಕಿಸುವ ಬಗ್ಗೆ ಮತ್ತು ನ್ಯಾಯಾಲಯಗಳಲ್ಲಿ ಬಾಕಿ ಇರುವ ಪ್ರಕರಣಗಳಲ್ಲಿ ಕ್ರಮ ತೆಗೆದುಕೊಳ್ಳುವ ಬಗ್ಗೆ ಉಲ್ಲೇಖ(1)ರಲ್ಲಿರುವ ಅಧಿಕೃತ ಜ್ಞಾಪನದಲ್ಲಿ ಸೂಚನೆಗಳನ್ನು ನೀಡಲಾಗಿರುತ್ತದೆ.

2) ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖ(2)ರ ಅಧಿಕೃತ ಜ್ಞಾಪನದಲ್ಲಿ ಹೆಚ್ಚುವರಿ ಸೂಚನೆಗಳನ್ನು ನೀಡಲಾಗಿರುತ್ತದೆ.

3) ಕರ್ನಾಟಕ ಸಿವಿಲ್ ಸೇವಾ(ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ)ನಿಯಮಗಳು, 1957ರಡಿ ಸಕ್ಷಮ ಶಿಸ್ತುಪ್ರಾಧಿಕಾರ ಸರ್ಕಾರಿ ನೌಕರರನ್ನು ಸೇವೆಯಿಂದ ಕಡ್ಡಾಯ ನಿವೃತ್ತಿಗೊಳಿಸಿ ಅಥವಾ ಸೇವೆಯಿಂದ ತೆಗೆದು ಹಾಕಿ ಅಥವಾ ಸೇವೆಯಿಂದ ವಜಾ ಮಾಡಿದ ಆದೇಶದ ವಿರುದ್ಧ ಸಂಬಂಧಿಸಿದ ನೌಕರರು ಕರ್ನಾಟಕ ಆಡಳಿತ ನ್ಯಾಯ ಮಂಡಳಿಯಲ್ಲಿ ಅರ್ಜಿ ಸಲ್ಲಿಸಿ ಪ್ರಶ್ನಿಸಿದಾಗ, ನ್ಯಾಯ ಮಂಡಳಿಯು ಅಂತಹ ಆದೇಶಕ್ಕೆ ತಡೆಯಾಜ್ಞೆ ನೀಡಿದಲ್ಲಿ, ಅಂತಹ ತಡೆಯಾಜ್ಞೆಯನ್ನು ಅನುಷ್ಠಾನಗೊಳಿಸುವುದಕ್ಕೆ ಸಂಬಂಧಿಸಿದಂತೆ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯು ನ್ಯಾಯಾಲಯ ನಿಂದನಾ ಅರ್ಜಿ ಸಂಖ್ಯೆ: 192/2012ರಲ್ಲಿ ದಿನಾಂಕ:21.09.2012ರಂದು ನೀಡಿರುವ ಆದೇಶದಲ್ಲಿ ಮಾಡಿದ್ದ ಅವಲೋಕನೆಯನ್ನಾಧರಿಸಿ ಉಲ್ಲೇಖ(3)ರಲ್ಲಿನ ಸುತ್ತೋಲೆಯನ್ನು ಹೊರಡಿಸಲಾಗಿತ್ತು.

4) ವಿಲೇಖನಾಧಿಕಾರಿ, ಕರ್ನಾಟಕ ಆಡಳಿತ ನ್ಯಾಯ ಮಂಡಳಿ, ಇವರು ದಿನಾಂಕ: 12.04.2013ರಂದು ಸರ್ಕಾರಕ್ಕೆ ಬರೆದಿರುವ ಪತ್ರದಲ್ಲಿ ಉಲ್ಲೇಖ(3)ರಲ್ಲಿರುವ ದಿನಾಂಕ: 16.03.2013ರ ಸುತ್ತೋಲೆಯಲ್ಲಿ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯು ನ್ಯಾಯಾಲಯ ನಿಂದನಾ ಅರ್ಜಿ ಸಂಖ್ಯೆ:192/2012ರಲ್ಲಿ ದಿನಾಂಕ:21.09.2012ರಂದು ನೀಡಿರುವ ಆದೇಶದ ಪೂರ್ಣ ಪಾಠವನ್ನು ಉದ್ಧರಿಸಿರುವುದಿಲ್ಲವೆಂದು ತಿಳಿಸುತ್ತಾ ಸದರಿ ಆದೇಶವನ್ನು ಸಂಪೂರ್ಣವಾಗಿ ಉದ್ಧರಿಸಿ ಅದನ್ನು ಸರಿಯಾಗಿ ವ್ಯಾಖ್ಯಾನಿಸಿ ಸುತ್ತೋಲೆಯನ್ನು ಹೊರಡಿಸುವಂತೆ ಕೋರಿರುತ್ತಾರೆ.

...2

5) ಮೇಲ್ಕಂಡ ಹಿನ್ನೆಲೆಯಲ್ಲಿ, ದಿನಾಂಕ:16.03.2013ರ ಸುತ್ತೋಲೆ ಸಂಖ್ಯೆ:ಸಿಆಸುಇ 07 ಸೇಇವಿ 2013ನ್ನು ಮುಂದುವರೆಸುತ್ತಾ, ಕರ್ನಾಟಕ ಆಡಳಿತ ನ್ಯಾಯ ಮಂಡಳಿಯು ನ್ಯಾಯಾಲಯ ನಿಂದನಾ ಅರ್ಜಿ ಸಂಖ್ಯೆ:192/2012ರಲ್ಲಿ ದಿನಾಂಕ:21.09.2012ರಂದು ನೀಡಿರುವ ಆದೇಶದ ಪೂರ್ಣಪಾಠವನ್ನು ಕೆಳಗೆ ಉದ್ಧರಿಸಲಾಗಿದೆ:

"Sri M.Nagarajan, learned AGA takes notice on behalf of respondents and submits that the order of stay only indicated that the order of dismissal was stayed but that since the order of dismissal had been given effect to before the order of stay was granted, the applicant has not been taken to duty. This type of thinking by the Government overlooks the fact that in all cases of dismissal, the order is given effect to immediately and only thereafter the aggrieved party will approach the court. The order of stay if granted by the court can not be considered as only paper order and if this type of stand is adopted by the Government there is no option for the Tribunal but to take action against the concerned officer for clear contempt of the Tribunal. It appears that the order of the Tribunal has not been properly understood by the Government. For the sake of clarification, we indicate that it is only in such cases, where the order of stay becomes inoperative or can not be obeyed that the party can plead his inability to obey the order. But here also, it is imperative that he shall appear before the court and shall seek modification of interim order.

Where an order of dismissal, or of compulsory retirement or of discharge from service is challenged, the order of stay by court suspends the order impugned during the period of stay and therefore the authority is bound to take back the relieved Government servant to duty. Therefore the respondent shall take back the applicant to duty forthwith and report-compliance positively by 5.10.2012.

A copy of this order be furnished to the learned AGA and another copy shall be furnished to the Principal Secretary, DPAR, Government of Karnataka for giving necessary instructions to controlling authorities"

ಕರ್ನಾಟಕ ಆಡಳಿತ ನ್ಯಾಯ ಮಂಡಳಿಯ ಮೇಲೆ ಉದ್ಧರಿಸಿದ ತೀರ್ಪನ್ನು ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿಗಳು:ಕಾರ್ಯದರ್ಶಿಗಳು:ಇಲಾಖಾ ಮುಖ್ಯಸ್ಥರು, ತಮ್ಮ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಶಿಸ್ತು ಪ್ರಾಧಿಕಾರಿಗಳ ಗಮನಕ್ಕೆ ತರಲು ಕೋರಿದೆ.

(ಡಾ॥ ಮಂಗಳ ಜಿ.ಎಸ್)
ಸರ್ಕಾರದ ಅಧೀನ ಕಾರ್ಯದರ್ಶಿ
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಸೇವಾ ನಿಯಮಗಳು-1)

ಇವರಿಗೆ:

ಸಂಕಲನಕಾರರು, ಕರ್ನಾಟಕ ರಾಜ್ಯಪತ್ರದ ವಿಶೇಷ ರಾಜ್ಯಪತ್ರದಲ್ಲಿ ಪ್ರಕಟಿಸಿ ಅದರ 500 ಪ್ರತಿಗಳನ್ನು ಒದಗಿಸುವಂತೆ ಕೋರಲಾಗಿದೆ.

...3

ಹಿಂಬರಹ ಸಂಖ್ಯೆ: ಡಿಟಿಇ 02 ಇಎಸ್‌ಟಿ(9)2013 / 2039 ದಿನಾಂಕ: 02.09.2013

ದಿನಾಂಕ : 24.07.2013ರ ಸರ್ಕಾರಿ ಸುತ್ತೋಲೆಯ ಪ್ರತಿಯನ್ನು ಮಾಹಿತಿಗಾಗಿ ಈ ಕೆಳಕಂಡವರಿಗೆ ಕಳುಹಿಸಿಕೊಡಲಾಗಿದೆ.

1. ಈ ಇಲಾಖೆಯ ಅಧೀನಕ್ಕೊಳಪಡುವ ಎಲ್ಲಾ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳು, ಸರ್ಕಾರಿ ಪಾಲಿಟೆಕ್ನಿಕ್, ಸರ್ಕಾರಿ ಕಿರಿಯ ತಾಂತ್ರಿಕ ಶಾಲೆಗಳು, ಸ್ಟೆರಿಕ್ ಸಂಸ್ಥೆ, ಬೆಂಗಳೂರು, ಸರ್ಕಾರಿ ಗಣಿ ಶಿಕ್ಷಣ ಶಾಲೆ, ಕೆ.ಜಿ.ಎಫ್ ಸಂಸ್ಥೆಗಳ ಪ್ರಿನ್ಸಿಪಾಲರುಗಳಿಗೆ ಮಾಹಿತಿಗಾಗಿ [ಇಲಾಖಾ ವೆಬ್‌ಸೈಟ್ ಮುಖಾಂತರ]
2. ಈ ನಿರ್ದೇಶನಾಲಯದ ಎಲ್ಲಾ ಅಧಿಕಾರಿಗಳಿಗೆ, ಜಂಟಿ ನಿರ್ದೇಶಕರು [ಆಡಳಿತ], ರಿಜಿಸ್ಟ್ರಾರ್ (ಆಡಳಿತ), ಸಾರ್ವಜನಿಕ ಸಂಪರ್ಕಾಧಿಕಾರಿ, ಸಹಾಯಕ ಆಡಳಿತಾಧಿಕಾರಿ (1), (2) ಹಾಗೂ (3) ಗಳಿಗೆ ಮಾಹಿತಿಗಾಗಿ
3. ಈ ನಿರ್ದೇಶನಾಲಯದ ಇ–ಆಡಳಿತ ವಿಭಾಗಕ್ಕೆ ಮಾಹಿತಿ ಹಾಗೂ ಮುಂದಿನ ಕ್ರಮಕ್ಕಾಗಿ.
4. ಈ ನಿರ್ದೇಶನಾಲಯದ ಡಿಇಕ್ಯೂ ವಿಭಾಗಕ್ಕೆ ಮಾಹಿತಿಗಾಗಿ
5. ನಿರ್ದೇಶನಾಲಯದ ಮಾಹಿತಿ ಹಕ್ಕು ವಿಭಾಗಕ್ಕೆ

M Devaraj

ಆಡಳಿತಾಧಿಕಾರಿ

2/9

Sh-est(9) Endsmnt